ದಲ್ಲ). 'ಮಮ' ಎನ್ನುವುದು ಬಂಧನಕ್ಕೂ 'ನ ಮಮ' ಎನ್ನುವುದು ಮೋಕ್ಷಕ್ಕೂ ಕಾರಣವಾಗುತ್ತವೆ.''

**ಸ್ಥಿರಮತಿಃ :** ಭಕ್ತನ ಮನಸ್ಸು ಸ್ಥಿರವಾಗಿರುತ್ತದೆ, ವಿಷಯವಾಸನೆಗಳಿಂದ ಚಂಚಲವಾಗಿರುವುದಿಲ್ಲ. ದೃಢವಾಗಿ ಬೇರುಬಿಟ್ಟಿರುವ ಒಂದು ಬೃಹದ್ ವೃಕ್ಷವು ಎಂತಹ ಬಿರುಗಾಳಿಗೂ ತುತ್ತಾಗುವುದಿಲ್ಲ. ಹಾಗೆಯೇ ಭಕ್ತನ ಮನಸ್ಸು ಭಗವಂತನಲ್ಲಿ ಸುಸ್ಥಿರವಾಗಿರುತ್ತದೆ, ಎಂತಹ ವಿಷಯ ಚಂಡಮಾರುತವೂ ಅದನ್ನು ಅಲುಗಾಡಿಸಲಾರದು.

ಈ ಭಕ್ತನ ಲಕ್ಷಣಗಳನ್ನೆಲ್ಲ ಹೇಳಿ ಶ್ರೀಕೃಷ್ಣನು ಈ ಕೆಳಗಿನ ಶ್ಲೋಕದೊಂದಿಗೆ ಅಧ್ಯಾಯವನ್ನು ಮುಕ್ತಾಯಗೊಳಿಸುತ್ತಾನೆ:

**ಯೇ ತು ಧರ್ಮ್ಯಾಮೃತಮಿದಂ ಯಥೋಕ್ತಂ ಪರ್ಯುಪಾಸತೇ ।**
**ಶ್ರದ್ದಧಾನಾ ಮತ್ಪರಮಾ ಭಕ್ತಾಸ್ತೇಽತೀವ ಮೇ ಪ್ರಿಯಾಃ ॥**

''ಯಾವ ಭಕ್ತರು ಶ್ರದ್ಧಾವಂತರಾಗಿ ನನ್ನಲ್ಲೇ ನಿಷ್ಠೆಯುಳ್ಳವರಾಗಿ ಈ ಮೇಲೆ ಹೇಳಿದ ಧರ್ಮ್ಯಾಮೃತವನ್ನು ಅನುಸರಿಸುತ್ತಾರೆಯೋ ಅವರು ನನಗೆ ಅತ್ಯಂತ ಪ್ರಿಯರು.''

ಈ ಮೇಲಿನ ಲಕ್ಷಣಗಳನ್ನು 'ಧರ್ಮ್ಯಾಮೃತ' ಎಂದು ಶ್ರೀಕೃಷ್ಣನು ಕರೆಯುತ್ತಾನೆ. ಇದು ಧರ್ಮ್ಯವೂ ಅಮೃತವೂ ಆಗಿದೆ. ಧರ್ಮ್ಯವೆಂದರೆ ನೀತಿಬದ್ಧವಾಗಿರುವುದು, ಮತ್ತು ಅಮೃತವೆಂದರೆ ಆಧ್ಯಾತ್ಮಿಕತೆ. ನೀತಿ ಮತ್ತು ಅಧ್ಯಾತ್ಮ ಎರಡೂ ಒಂದಾಗಿರಬೇಕೆಂಬುದನ್ನು ಇದು ಸೂಚಿಸುತ್ತದೆ. ಒಂದು ಕಟ್ಟಡವನ್ನು ಸರಿಯಾದ ಪ್ರಮಾಣದಲ್ಲಿ ವಸ್ತುಗಳನ್ನು ಉಪಯೋಗಿಸಿ, ಸರಿಯಾದ ರೀತಿಯಲ್ಲಿ ಕಟ್ಟಿದರೆ ಅದು ಬಹುಕಾಲ ಉಳಿಯುತ್ತದೆ. ಹಾಗೆಯೇ ಆಧ್ಯಾತ್ಮಿಕತೆಯನ್ನು ಸರಿಯಾದ ನೈತಿಕತೆಯ ಆಧಾರದ ಮೇಲೆ ಕಟ್ಟಬೇಕು – ಇಲ್ಲದಿದ್ದರೆ ಭೂಕಂಪದಿಂದ (ವಿಪತ್ತುಗಳಿಂದ) ತತ್ತರಿಸಿ ಹೋಗುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಈ ಆಧ್ಯಾತ್ಮಿಕ ಸಸಿಯನ್ನು ಧರ್ಮದ ಬೇಲಿಯನ್ನು ಕಟ್ಟಿ ರಕ್ಷಿಸಬೇಕು. ಇಲ್ಲದಿದ್ದರೆ ವಿಷಯ ಪ್ರಾಣಿಗಳು ಅದನ್ನು ತಿಂದುಹಾಕುತ್ತವೆ. ಅದು ಹೆಮ್ಮರವಾದ ಮೇಲೆ ಈ ಬೇಲಿ ಬೇಕಾಗುವುದಿಲ್ಲ, ಏಕೆಂದರೆ ಆಗ ಧರ್ಮದ ಬಲ ಅದರ ಸ್ವಭಾವವಾಗುತ್ತದೆ. ಆಗ ನೀತಿ ಮತ್ತು ಅಧ್ಯಾತ್ಮ ಒಂದಾಗಿಬಿಡುತ್ತದೆ. ಇಂತಹ ಭಕ್ತನು ಶ್ರದ್ಧಾವಂತನೂ ಭಗವನ್ನಿಷ್ಠನೂ ಆಗಿರುತ್ತಾನೆ, ಅಂದರೆ ಭಗವಂತನಲ್ಲಿ ಸಂಪೂರ್ಣ ಶರಣಾಗಿರುತ್ತಾನೆ. ಈ ಶರಣಾಗತಿಯ ಭಾವವನ್ನು ಚಿತ್ರಿಸುವ ಒಂದು ಸುಂದರ ಕತೆಯೊಂದಿಗೆ ಈ '**ಭಕ್ತನ ಲಕ್ಷಣ**'ವನ್ನು ಮುಕ್ತಾಯಗೊಳಿಸೋಣ:

ಪಂಡಿತನೊಬ್ಬನು ಸತ್ಯವನ್ನು ತಿಳಿಸುವ ವ್ಯಕ್ತಿಯೊಬ್ಬನನ್ನು ತನಗೆ ತೋರಿಸಬೇಕೆಂದು ಬಹುಕಾಲದಿಂದ ಭಗವಂತನನ್ನು ಪ್ರಾರ್ಥಿಸುತ್ತಿದ್ದ. ಒಂದು ದಿನ ಭಗವದ್ವಾಣಿ ಕೇಳಿಸಿತು: ''ಆ ಚರ್ಚಿನ ಹತ್ತಿರ ಹೋಗು. ಅಲ್ಲಿರುವ ವ್ಯಕ್ತಿ ನಿನಗೆ ಧನ್ಯತೆಯ ಮಾರ್ಗವನ್ನು ತೋರಿಸುತ್ತಾನೆ.'' ಪಂಡಿತ ಅಲ್ಲಿಗೆ ಹೋದಾಗ, ಚಿಂದಿ ಬಟ್ಟೆಯನ್ನುಟ್ಟ ಕಡುಬಡವನೊಬ್ಬ ಅಲ್ಲಿ ಕಾಣಿಸಿದ. ಪಂಡಿತನು ಅವನನ್ನು ನೋಡಿ ಕನಿಕರದಿಂದ, ''ದೇವರು ನಿನಗೆ ಸುದಿನವನ್ನು ಕರುಣಿಸಲಿ'' ಎಂದ. ''ನನಗೆ ದುರ್ದಿನವೆಂಬುದೇ ಇಲ್ಲ'' ಎಂದು ಆ ವ್ಯಕ್ತಿ ಉತ್ತರಿಸಿದ. ''ನಿನಗೆ ಒಳ್ಳೆಯ ಅದೃಷ್ಟ ಲಭಿಸಲಿ'' ಎಂದು ಪಂಡಿತನೆಂದಾಗ, ''ನನಗೆ ದುರದೃಷ್ಟವೆಂಬುದೇ ಇಲ್ಲ'' ಎಂದನಾ ವ್ಯಕ್ತಿ. ''ನಿನಗೆ ಸುಖವುಂಟಾಗಲಿ'' ಎಂದು ಹೇಳಿದಾಗ ಆತನೆಂದ, ''ನನಗೆ ದುಃಖವೇ ಇಲ್ಲ'' ಎಂದು. ಪಂಡಿತ ಆಶ್ಚರ್ಯದಿಂದ, ''ಹೀಗೇಕೆ ಉತ್ತರಿಸುತ್ತೀಯೆ? ದಯವಿಟ್ಟು ವಿವರಿಸಿ ಹೇಳು'' ಎಂದು ಕೇಳಿದ.

ಆ ವ್ಯಕ್ತಿ ಹೇಳಿದ: ''ನೀನು ನನಗೆ ಸುದಿನವನ್ನು ಅಪೇಕ್ಷಿಸಿದೆ. ಆದರೆ ನನಗೆ ದುರ್ದಿನವೆಂಬುದೇ ಇಲ್ಲ. ಏಕೆಂದರೆ ನಾನು ಹಸಿದಾಗಲೂ ದೇವರನ್ನು ಕೊಂಡಾಡುತ್ತೇನೆ. ಶೀತೋಷ್ಣಗಳಿಂದ ಬಾಧಿತನಾದಾಗಲೂ ದೇವರನ್ನು ಕೊಂಡಾಡುತ್ತೇನೆ. ನನ್ನನ್ನು ಜನ ನಿಂದಿಸಿದಾಗಲೂ ದೇವರನ್ನು ಕೊಂಡಾಡುತ್ತೇನೆ. ಆದ್ದರಿಂದ ನನಗೆ ದುರ್ದಿನವೆಂಬುದಿಲ್ಲ. ನೀನು ನನಗೆ ಒಳ್ಳೆಯ ಅದೃಷ್ಟವನ್ನು ಬಯಸಿದೆ. ಆದರೆ ನನ್ನ ಪಾಲಿಗೆ ದುರದೃಷ್ಟವೆಂಬುದೇ ಇಲ್ಲ. ನಾನು ಯಾವಾಗಲೂ ದೇವರೊಂದಿಗೆ ಇರುತ್ತೇನೆ. ಅವನು ಮಾಡುವುದೆಲ್ಲ ಒಳ್ಳೆಯದೆಂದು ನನಗೆ ಗೊತ್ತು. ಅವನು ಏನೇ ನೀಡಲಿ– ಒಳ್ಳೆಯದೊ ಕೆಟ್ಟದ್ದೊ – ಅದು ನನ್ನ ಒಳ್ಳೆಯದಕ್ಕೇ ಎಂದು ಸಂತೋಷದಿಂದ ಸ್ವೀಕರಿಸುತ್ತೇನೆ. ಆದ್ದರಿಂದ ನನಗೆ ಯಾವುದು ದುರದೃಷ್ಟ? ನೀನು ನನಗೆ ಸುಖವುಂಟಾಗಲಿ ಎಂದು ಹರಸಿದೆ. ನಾನು ಯಾವಾಗಲೂ ಸುಖಿ. ಏಕೆಂದರೆ ನಾನು ಭಗವದಿಚ್ಛೆಯಂತೆ ಬಾಳುತ್ತೇನೆ. ಅವನ ಇಚ್ಛೆಗೆ ನಾನು ಸಂಪೂರ್ಣ ಶರಣಾಗಿದ್ದೇನೆ. ಅವನಿಚ್ಛೆಯೇ ನನ್ನ ಇಚ್ಛೆ.''

''ಆದರೆ, ದೇವರು ನಿನ್ನನ್ನು ನರಕಕ್ಕೆ ತಳ್ಳಿದರೆ ಏನು ಮಾಡುತ್ತೀಯೆ?'' ಅವನ ಉತ್ತರ: ''ದೇವರು ನನ್ನನ್ನು ನರಕಕ್ಕೆ ಕಳಿಸುವನೆ? ಒಂದು ವೇಳೆ ಕಳಿಸಿದರೂ ನಾನು ಎರಡು ಕೈಗಳಿಂದ ಭಗವಂತನನ್ನು ಆಲಿಂಗಿಸುತ್ತೇನೆ. ಒಂದು ಕೈ ನೈಜ ನಮ್ರತೆ. ಅದರಿಂದ ಅವನ ಅಡಿಯಲ್ಲಿ ನಾನು ಸಂಪುರ್ಣ ಶರಣಾಗಿ ಅವನ ಮಾನವೀಯತೆಯನ್ನು ಅಪ್ಪಿಕೊಳ್ಳುತ್ತೇನೆ. ಪ್ರೀತಿಯ ಇನ್ನೊಂದು ಕೈಯಿಂದ ಅವನ ದಿವ್ಯ ಸ್ವರೂಪವನ್ನು ಅಪ್ಪಿಕೊಳ್ಳುತ್ತೇನೆ. ನಾನು ಅವನನ್ನು ಯಾವ ರೀತಿ ಅಪ್ಪಿಕೊಳ್ಳುತ್ತೇನೆಂದರೆ ಅವನೂ ನನ್ನೊಡನೆ ನರಕಕ್ಕೆ ಬರಬೇಕು. ದೇವರಿಲ್ಲದೆ ಸ್ವರ್ಗದಲ್ಲಿರುವುದಕ್ಕಿಂತ ದೇವರೊಂದಿಗೆ ನರಕದಲ್ಲಿರುವುದೇ ನನಗೆ ಇಷ್ಟ. ನಮ್ರತೆಯಿಂದ ಭಗವಂತನಲ್ಲಿ ಪೂರ್ಣ ಶರಣಾಗುವುದೇ ಅವನನ್ನು ಪಡೆಯುವುದಕ್ಕೆ ಅತಿ ಹತ್ತಿರದ ಮಾರ್ಗ. ಶರಣಾಗತಿಯ ಭಾವದಿಂದ ಶೀತೋಷ್ಣಾದಿಗಳನ್ನು ಸಹಿಸಿಕೊಳ್ಳಬೇಕು.

*(ಮುಗಿಯಿತು)*